ಭವರ್‌ಲಾಲ್‌ರ ವ್ಯಾಪಾರ ತುಂಬಾ ವಿಸ್ತಾರಗೊಂಡಿತ್ತು. ಪುರಿಯಲ್ಲೂ ಎರಡು ದೊಡ್ಡ ಫ್ಯಾಕ್ಟರಿಗಳನ್ನು ತೆರೆದಿದ್ದರಲ್ಲದೆ ಮುಂಬಯಿಯಲ್ಲಿ ಅತಿ ದೊಡ್ಡ ಸ್ಪೋರ್ಟ್ಸ್ ಐಟಂಗಳ ಫ್ಯಾಕ್ಟರಿಯನ್ನು ಮತ್ತು ಶೋರೂಮನ್ನು ತೆರೆದಿದ್ದರು. ಮೂರು ವರ್ಷಗಳ ಕಾಲ ನಾನು ಭವರ್‌ಲಾಲರ ಸ್ವಂತ ಮನೆಯವನಂತೆ ಆಗಿ ಬಿಟ್ಟಿದ್ದೆ. ಮನೆಗೆ ಬೇಕಾದ ಸಾಮಾನುಗಳನ್ನು ತರುವುದು, ಅಡುಗೆ ಮನೆಯಲ್ಲಿ ತರಕಾರಿ ರೆಡಿ ಮಾಡಿಕೊಡುವುದು, ಮುಸುರೆ ಸಾಮಾನು ತೊಳೆಯುವುದು, ಬಟ್ಟೆ ಒಗೆಯುವುದು ಮುಂತಾದ ಎಲ್ಲಾ ಕೆಲಸಗಳನ್ನು ಬಿಡುವಿಲ್ಲದಂತೆ ಮಾಡುತ್ತಿದ್ದೆ. ನನಗಾಗ ಇಪ್ಪತ್ತು ವರ್ಷಗಳು ಮೀರಿದ್ದಿರಬಹುದು. ಅಂತಹ ಒಂದು ದಿನ ಭವರ್‌ಲಾಲರ ಹೆಂಡತಿ ತನಗೆ ಮೈಕೈ ನೋಯುತ್ತಿದೆಯೆಂದು ಮಸಾಜ್ ಮಾಡಲು ಹೇಳಿದ್ದರು. ನಾನು ಮುಜುಗರದಿಂದಲೇ ಒಪ್ಪಿದ್ದೆ. ಮಕ್ಕಳಿಬ್ಬರೂ ಶಾಲೆಗೆ ಹೋಗಿದ್ದರು. ಆಕೆಯ ಬೆತ್ತಲೆ ದೇಹವನ್ನು ಆಪ್ಯಾಯಮಾನವಾಗಿ ಮಸಾಜ್ ಮಾಡತೊಡಗಿದ್ದೆ...'

'ದೇಹದಲ್ಲಿದ್ದುಕೊಂಡೇ ಮನಸ್ಸು ಅನೇಕ ವರ್ಷಗಳ ಹಿಂದಕ್ಕೆ ಸಂಚರಿಸ ಬಲ್ಲದು. ಆದರೆ ದೇಹಕ್ಕೆ ಅಂತಹ ಶಕ್ತಿಯಿಲ್ಲ. ಮನುಷ್ಯನಿಂದ ಹಿಡಿದು ಎಲ್ಲಾ ಪ್ರಾಣಿಪಕ್ಷಿಗಳ ರಚನಾ ವಿನ್ಯಾಸದಲ್ಲಿ ಅನೇಕ ಬದಲಾವಣೆಗಳಿದ್ದರೂ ವರ್ತನೆಗಳಲ್ಲಿ ಮಾತ್ರ ಅತ್ಯಂತ ಸಾಮ್ಯತೆಗಳಿವೆ...' ಆಕೆ ನನ್ನ ಮಾತುಗಳನ್ನು ಮಧ್ಯದಲ್ಲಿ ತುಂಡರಿಸಿದವಳು ನಾನು ಅಚ್ಚರಿಗೊಳ್ಳುವಂತೆ ಮುಂದುವರೆಸಿದ್ದಳು:

'ಮುಂದೆ ಭವರ್‌ಲಾಲ್ ಫ್ಯಾಕ್ಟರಿ, ಶೋ ರೂಂ, ಮನೆಗಳ ಮೇಲೆ ಇನ್‌ಕಮ್ ಟ್ಯಾಕ್ಸ್ ರೈಡ್ ಆಗುತ್ತದೆ. ಮುಂಬಯಿ ಸ್ಪೋರ್ಟ್ಸ್ ಫ್ಯಾಕ್ಟರಿ, ಶೋ ರೂಂ, ಪುಣೆಯ ಒಂದು ಫ್ಯಾಕ್ಟರಿ ನಿಮ್ಮ ಹೆಸರಿನಲ್ಲಿರುತ್ತವೆ. ಇನ್‌ಕಮ್ ಟ್ಯಾಕ್ಸ್‌ನವರು, ಪೊಲೀಸ್‌ನವರು ನಿಮ್ಮನ್ನು ಅರೆಸ್ಟ್ ಮಾಡಿ ಬಿಡುಗಡೆ ಗೊಳಿಸುತ್ತಾರೆ. ನಂತರ ಭವರ್‌ಲಾಲ್ ಪುಣೆಗೆ ಶಿಫ್ಟ್ ಆಗುತ್ತಾರೆ. ಭವರ್‌ಲಾಲರ ಹೆಂಡತಿಯೊಂದಿಗೆ ಮೂರು ವರ್ಷ ನೀವು ಅನುಭವಿಸಿದ ಸುಖ ಅನ್‌ಡಿಫೈನಬಲ್...'

'ನನಗೀಗ ಅವು ಯಾವುವೂ ಮುಖ್ಯವಾಗುತ್ತಿಲ್ಲ. ನನ್ನ ತಂದೆ–ತಾಯಿ ಯಾರಿರಬಹುದೆಂಬ ಕುತೂಹಲ ವಿಪರೀತವಾಗುತ್ತದೆ. ಧಾರಾವಿ ಸ್ಲಂನ ವಯಸ್ಸಾದ ಪ್ರತಿಯೊಬ್ಬರನ್ನೂ ನನ್ನ ತಂದೆ ತಾಯಿಗಳಿರಬಹುದೆ ಎಂದು ಗುಮಾನಿಯಿಂದ ನೋಡುತ್ತೇನೆ...' ನನ್ನ ಗೊಂದಲವನ್ನು ವ್ಯಕ್ತಪಡಿಸಿದ್ದೆ. ಅಷ್ಟರಲ್ಲಿ ಸುಪ್ಪತ್ತಿಗೆಯ ಮೇಲೆ ಮಲಗಿದ್ದ ಯುವತಿ ಒಮ್ಮೆ ಆಕಳಿಸಿ ಮತ್ತೆ ನಿದ್ದೆಗೆ ಜಾರಿದ್ದಳು.

'ಮನುಷ್ಯನ ದೇಹ ಮತ್ತು ಮನಸ್ಸುಗಳ ನಡುವೆ **integrity** ಆಗಾಗ **lapse** ಆಗುತ್ತಿರುತ್ತದೆ. ಹಾಸಿಗೆಯ ಮೇಲೆ ಮಲಗಿರುವ ಹದಿನೆಂಟು ವರ್ಷದ ಯುವತಿಗೆ ಮೂರು ತಿಂಗಳಿಂದಲೂ ಇಲ್ಲಿ ಟ್ರೀಟ್‌ಮೆಂಟ್ ಕೊಡುತ್ತಿದ್ದೇನೆ. ಟ್ರೀಟ್‌ಮೆಂಟ್ ಕೊನೆಯ ಹಂತಕ್ಕೆ ಬಂದಿದೆ. ರಿಕವರಿ ಆಗುತ್ತಿದ್ದಾಳೆ ಈಗ. ದೆಹಲಿಯ ಆಗರ್ಭ ಶ್ರೀಮಂತರ ಒಬ್ಬಳೇ ಮಗಳು. ಒಂದು ಸಿಂಪಲ್ ಕಾರಣಕ್ಕಾಗಿ ಈ ಹುಡುಗಿ ತನ್ನ ದೇಹವನ್ನು ದಂಡಿಸಿಕೊಂಡಿರುವ ಭಯಾನಕ ಥಿಯರಿಯೇ ವಿಚಿತ್ರವಾಗಿ ಕಾಣುತ್ತದೆ. ತಂದೆ ತಾಯಿಗಳು ಸದಾ ಜಗಳವಾಡುತ್ತಿದ್ದುದರ ವಿರುದ್ಧ ಹಗೆ ತೀರಿಸಿಕೊಳ್ಳಲು ಈ ಎರಡು ವರ್ಷಗಳಲ್ಲಿ ಸುಮಾರು ಅರವತ್ತು, ಎಪ್ಪತ್ತು ಜನರೊಂದಿಗೆ ಮಲಗಿದ್ದಾಳೆ. ಅದರಲ್ಲಿ ಯುವಕರು ಮುದುಕರು ಸೇರಿದ್ದಾರೆ. ಅಪರಿಚಿತ ಭಿಕ್ಷುಕರೊಂದಿಗೆ ಕೂಡ ಮಲಗಿದ್ದಾಳೆ. ದೇಹ ಮತ್ತು ಮನಸ್ಸುಗಳು ನಡುವೆ ನಿರಂತರ ಸಮತೋಲನವನ್ನು ಕಾಯ್ದುಕೊಳ್ಳುವುದಿದೆಯಲ್ಲ ಅದು ಜೀವ ಜಗತ್ತಿನ ಎಲ್ಲಾ ಪ್ರಭೇಧಗಳ ಅತ್ಯಂತ ದೊಡ್ಡ ಚಾಲೆಂಜ್...'

ಅಷ್ಟರಲ್ಲಿ ಬಿಸಿ ಬಿಸಿ ಪರೋಟ, ಚಿಕನ್ ಮಸಾಲ, ಫಿಶ್‌ಫ್ರೈ ಬಂದಿತ್ತು. ಊಟ ಮುಗಿಸಿ ಆಕೆ ಹೇಳಿದ್ದರು: 'ಹೇಗೂ ಮುಂಬಯಿಂದ ಬಂದಿರುವಿರಿ. ನಾಳೆ ಬೆಳಿಗ್ಗೆಯೇ ಇಲ್ಲಿಂದ ಹೊರಟು ದೆಹಲಿಗೆ ಹೋಗಿ. ಅಲ್ಲಿಂದ ಇಪ್ಪತ್ತೈದು ಕಿಲೋಮೀಟರ್ ಗ್ರೇಟರ್ ನೋಯಿಡಾದಲ್ಲಿ ನನ್ನ ಕ್ಲಾಸ್‌ಮೇಟ್ ಡಾಕ್ಟರ್ ಅತಾವುಲ್ಲಾ ಖಾನ್ ಇದ್ದಾರೆ. ಆತ ನಿಮ್ಮನ್ನು ಸಂಪೂರ್ಣವಾಗಿ ಗೊಂದಲಗಳಿಂದ ಹೊರತರಬಲ್ಲನೆಂಬ ನಂಬಿಕೆ ನನಗೆ. ನನ್ನ ಈ ಭೇಟಿಗೆ ನೀವು ಫೀಜು ಕೊಡುವುದೇನೂ ಬೇಕಿಲ್ಲ. ಇನ್ನೆರಡು ದಿನ ಕಳೆಯುವಷ್ಟರಲ್ಲಿ ಕನಸುಗಳಿಂದ ಉಂಟಾಗಿರುವ ಭಯವನ್ನು ಕಳೆದುಕೊಳ್ಳುತ್ತೀರಿ. ಇಂದು ರಾತ್ರಿಯಿಂದಲೇ ನಿಮ್ಮ ಕನಸುಗಳ ತೀವ್ರತೆ ಕ್ಷೀಣಿಸುತ್ತಾ ಹೋಗುತ್ತದೆ...' ನಾನು ನನಗೆ ಕಾದಿರಿಸಿದ್ದ ರೂಮಿಗೆ ಹೋಗಿ ಮಲಗಿದ್ದೆ. ನಿದ್ದೆ ಆವರಿಸತೊಡಗಿತ್ತು.

ಮಾರನೆಯ ದಿನ ಮಧ್ಯಾಹ್ನ ಒಂದು ಗಂಟೆಗೆಲ್ಲ ನಾನು ಗ್ರೇಟರ್ ನೋಯಿಡಾದ ಡಾಕ್ಟರ್ ಅತಾವುಲ್ಲಾ ಖಾನ್‌ರವರ ವಿಶಾಲವಾದ ಫ್ಲಾಟ್‌ನಲ್ಲಿ ಕುಳಿತಿದ್ದೆ. ಡಾಕ್ಟರ್ ನೇಹಾರವರು ಈಗಾಗಲೇ ಫೋನು ಮಾಡಿದ್ದರಿಂದ ತುಂಬಾ ಮುತುವರ್ಜಿಯಿಂದ ಬರಮಾಡಿಕೊಂಡಿದ್ದರು. ಸಣ್ಣಗೆ, ಉದ್ದಕ್ಕೆ ಇದ್ದ ಡಾಕ್ಟರ್ ಅತಾವುಲ್ಲಾ ದಪ್ಪನೆಯ ಕನ್ನಡಕವನ್ನು ಹಾಕಿಕೊಂಡಿದ್ದರು. ಎಲ್ಲೆಂದರಲ್ಲೆ ಹರಡಿಕೊಂಡು ಬಿದ್ದಿದ್ದ ಪುಸ್ತಕಗಳು. ತಾವೇ ಮಾಡಿದ್ದ ಗ್ರೀನ್ ಟೀಯನ್ನು ಕೊಡುತ್ತಾ 'ಡಾಕ್ಟರ್ ನೇಹಾ ಬ್ಯಾನರ್ಜಿ ಫೋನ್ ಮಾಡಿದ್ದಳು. ನಿರಂತರವಾಗಿ ಸುಖ ಅನುಭವಿಸುವ ದೇಹಗಳಲ್ಲಿ ಕ್ರಮೇಣ ಆಸಕ್ತಿ, ಆಕರ್ಷಣೆ ಕಡಿಮೆಯಾಗುತ್ತಾ ಹೋಗುತ್ತದೆ. ಹೆಣ್ಣು ಮತ್ತು ಗಂಡು ಎರಡರಲ್ಲೂ ಇಂಥ ಲಕ್ಷಣಗಳು ತೀವ್ರವಾಗಿ ಅಂತರ್ಗತವಾಗಿರುವುದರಿಂದಲೇ ಮನುಷ್ಯ ನಿರ್ಮಿಸಿಕೊಂಡಿರುವ ಅನೇಕ ಪರಿಮಿತಿಗಳು ಸುಲಭವಾಗಿ ಸಡಿಲಗೊಳ್ಳುವುದು. ನಾನು ಮೆಡಿಸಿನ್ ಓದಿದ್ದರೂ ನನಗೆ ಭೂಗೋಳ ಎಂದರೆ ತುಂಬಾ ಇಷ್ಟ. ಭೂಮಿಯ ಮೇಲ್ಮೈ ಲಕ್ಷಣಗಳಿವೆಯಲ್ಲ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಎಷ್ಟೊಂದು ವ್ಯತ್ಯಾಸಗಳಿರುತ್ತವೆ ನೋಡಿ...' ಟೀ ಮುಗಿದಿತ್ತು.

'ನಿಮ್ಮ ಅಮೂಲ್ಯವಾದ ಸಮಯವನ್ನು ನಾನು ಹಾಳು ಮಾಡುತ್ತಿಲ್ಲ ತಾನೆ...?' ನಮ್ರನಾಗಿ ಕೇಳಿದ್ದೆ ನಾನು.

'ಓಹ್, ಎಲ್ಲರೂ ಸಮಯದ ಬಗ್ಗೆ ಮಾತನಾಡುವವರೆ. **Actualy you cannot feel or touch the time.** ಅದೊಂದು ಕಾಲ್ಪನಿಕ ಸಂಗತಿ. ಅದು ಕ್ರಿಯೆಯಾಗಲೀ, ವಸ್ತುವಾಗಲೀ ಅಲ್ಲವೇ ಅಲ್ಲ. ಸಮಯ ಅನ್ನೋದು ಆ ಕ್ಷಣದ ಪ್ರಜ್ಞೆ ಮಾತ್ರ. ನಾವು ಹುಟ್ಟುವಾಗಲಾಗಲೀ, ಸಾಯುವಾಗಲಾಗಲೀ ಗಾಳಿ, ಬೆಂಕಿ, ನೀರು, ಆಹಾರ ಮುಂತಾದವುಗಳೊಂದಿಗೆ ಅನುಸಂಧಾನಗೊಳ್ಳುತ್ತಿರುತ್ತೇವೆ. ಆದರೆ ಅಂಥ ಅನುಸಂಧಾನ ಸಮಯದೊಂದಿಗೆ ಏರ್ಪಡುವುದೇ ಇಲ್ಲ. ಗಡಿಯಾರ ಎಂಬುದು ಒಂದು **fake device** ಬ್ರಹ್ಮಾಂಡಕ್ಕೆ ಸಮಯ ಅನ್ನೋದನ್ನ ಹೇಗೆ ಫಿಕ್ಸ್ ಮಾಡ್ತೀರ? ನಿಮಗೆ ಬೀಳುತ್ತಿರುವ ಕನಸುಗಳು ಕೂಡ ಹಾಗೆಯೇ ಎಂದು ತಿಳಿದುಕೊಳ್ಳಿ. ನಮಗೆ ಪ್ರಜ್ಞೆ ಇರುವುದರಿಂದ ಗುರುತಿಗಾಗಿ ಹೆಸರುಗಳನ್ನು ಇಟ್ಟು ಕೊಂಡಿದ್ದೇವೆ. ಹೆಸರುಗಳೇ ಇಲ್ಲ ಎಂದು ತಿಳಿದುಕೊಳ್ಳಿ. ಒಬ್ಬ ವ್ಯಕ್ತಿಯನ್ನು ನಿರಂತರವಾಗಿ ಒಂದು ಕತ್ತಲೆ ಕೋಣೆಯಲ್ಲಿ ಕೂಡಿ ಹಾಕಿ. ಹಗಲು ರಾತ್ರಿಗಳಾಗುತ್ತಿರುವುದು ಭೂಮಿ ತಿರುಗುತ್ತಿರುವುದರಿಂದಾಗಿ. ನೀವು ಭೂಮಿಯ ಅಟ್ಮಾಸ್ಫಿಯರ್ ಬಿಟ್ಟು ಹೋಗಿ ಆಗ ನಿಮಗೆ ದರ್ಶನವಾಗುವುದು ಶೂನ್ಯ ಮಾತ್ರ. ಭೂಮಿಯ ಮೇಲೆ ಶೂನ್ಯ ಇಲ್ಲದಿರುವುದರಿಂದಲೇ ನಾವೆಲ್ಲ ಬದುಕುತ್ತಿರುವುದು ಮತ್ತು ಇಡೀ ಬ್ರಹ್ಮಾಂಡದಲ್ಲಿ ಭೂಮಿ ಪುಣ್ಯ ಗ್ರಹ ಎನಿಸಿರುವುದು...' ನನ್ನ ಒಂದೇ ಒಂದು ಮಾತಿಗೆ ಇಷ್ಟೆಲ್ಲ ವಿವರಗಳನ್ನು ಕೊಟ್ಟಿದ್ದರು ಡಾಕ್ಟರ್ ಅತಾವುಲ್ಲಾ ಖಾನ್. ನಿಜ ಹೇಳಬೇಕೆಂದರೆ ನನಗೆ ಆತನ ಮಾತುಗಳ ತಲೆ ಬುಡ ಕೂಡ ಅರ್ಥವಾಗಿರಲಿಲ್ಲ.

'ನಾನು ಸಂಜೆಗೆ ಮುಂಬಯಿಗೆ ವಿಮಾನ ಹತ್ತಬೇಕು...' ಹೇಳಿದೆ.

'ನೇಹಾ ಬ್ಯಾನರ್ಜಿ ಹೇಳಿದ್ದರಿಂದ ಇವೊತ್ತಿನ ನನ್ನ ಎಲ್ಲಾ



ಈಶ್ವರ

## ಒಂದೇ ಪಾದ

ಸ್ವಾಮಿಯೆಂದರು
ಪಾದಪೂಜೆಗೆ
ಕೊಡಿರಿ 'ಇಪ್ಪತ್ತು ಸಾವಿರ'
ಭಕ್ತನೆಂದ 'ಒಂದೇ ಪಾದ'
ಕೊಡಿ ಸಾಕು, ನನ್ನತ್ರ ಇರೋದು
ಕೇವಲ 'ಹತ್ತು ಸಾವಿರ'

★ ಫಾಲನೇತ್ರ, ಗಂಗಪ್ಪ ಸಜ್ಜನ